**ಕರ್ನಾಟಕ ಸರ್ಕಾರ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ.211/2014**

**ಪಿ.ಡಬ್ಲ್ಯೂ:01**

**ಸಾಕ್ಷಿದಾರರ ಹೆಸರು** : ಟಿ ಹೆಚ್ ಚಂದ್ರಪ್ಪ
**ತಂದೆಯ ಹೆಸರು** : ಹನುಮಂತಣ್ಣ
**ವಯಸ್ಸು** : 61 ವರ್ಷ
**ಉದ್ಯೋಗ** : ನಿವೃತ್ತ ಎ ಎಸ್ ಐ
**ವಾಸಸ್ಥಳ** : ತರೀಕೆರೆ

**ದಿನಾಂಕ: 24-02-2020 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ದಂಡ ಪ್ರಕ್ರಿಯಾ ಸಂಹಿತೆ ಕಲಂ 299 ಅಡಿ ಸಾಕ್ಷಿ ಹೇಳಿಕೆ:-**

ನಾನು ಜುಲೈ **2018** ರಿಂದ ದಿ: **31-05-2019** ರವರೆಗೆ ಲಕ್ಕವಳ್ಳಿ ಪೋಲಿಸ್ ಠಾಣೆಯಲ್ಲಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ನಮ್ಮ ಠಾಣಾ ಪಿ ಎಸ್ ಐ ರವರು **3** ನೇ ಆರೋಪಿಯಾದ ಮನೋಜ್ ಬಿನ್ ತಂಗಪ್ಪ ಈತನ ಮೇಲೆ ನ್ಯಾಯಾಲಯವು ಉದ್ಘೋಷಣಾ ಹಾಗೂ ಜಪ್ತಿ ಆದೇಶವನ್ನು ಹೊರಡಿಸಿದ್ದು, ನನಗೆ ಹಾಗೂ ಪಿ ಸಿ **667** ವಸಂತಕುಮಾರ್ ರವರಿಗೆ ಜಾರಿ ಮಾಡಲು ನಿರ್ದೇಶಿಸಿದ ಮೇರೆಗೆ ನಾನು ದಿ: **01/08/2018** ರಂದು ಕೇರಳ ರಾಜ್ಯದ ಆಲೂರು ಗ್ರಾಮ ಪಂಚಾಯ್ತಿ ಕಲೇತುಮಾಕಾರ್ ಗ್ರಾಮಕ್ಕೆ ಹೋಗಿ ಆಲೂರು ಪೋಲೀಸರ ಸಹಾಯದಿಂದ **3** ನೇ ಆರೋಪಿ ಮನೋಜ್ ರವರ ಮನೆಯ ಹತ್ತಿರ ಹೋಗಿ ನ್ಯಾಯಾಲಯದ ಉದ್ಘೋಷಣಾ ಹಾಗೂ ಜಪ್ತಿ ಆದೇಶದ ಬಗ್ಗೆ **3** ನೇ ಆರೋಪಿಯಾದ ಮನೋಜ್ ತಂಗಚನ್ ಬಗ್ಗೆ ವಿಚಾರಿಸಿದಾಗ ಆತ ಅಲ್ಲಿ ಇರುವಿಕೆಯ ಬಗ್ಗೆ ಯಾವುದೇ ಮಾಹಿತಿ ದೊರೆಯಲಿಲ್ಲ. ನಂತರ ಸ್ಥಳೀಯರಾದ ವರ್ಗೀಸ್ ಬಿನ್ ಕೆ ಪಿ ವರ್ಗೀಸ್, ವಿನೋದ್ ಪಂಚಾಯ್ತುದಾರರನ್ನು ಮಾಡಿಕೊಂಡು ಸದರಿಯವರ ಸಮಕ್ಷಮ ಆರೋಪಿಯನ್ನು ಮನೆಯನ್ನು ಶೋದನೆ ಮಾಡಲಾಗಿ ಆರೋಪಿ ಇರಲಿಲ್ಲ. ನಂತರ ಆರೋಪಿಯ ಚರ ಹಾಗೂ ಸ್ಥಿರ ಆಸ್ತಿ ಇರುವಿಕೆ ಬಗ್ಗೆ ಆರೋಪಿಯ ತಂದೆಯಲ್ಲಿ ವಿಚಾರಿಸಿದಾಗ ಸದರಿಯವರು ಯಾವುದೇ ಚರ ಹಾಗೂ ಸ್ಥಿರ ಆಸ್ತಿ ಆರೋಪಿ ಮನೋಜ್ ನವರ ಹೆಸರಿನಲ್ಲಿ ಇರುವುದಿಲ್ಲ ಎಂದು ತಿಳಿಸಿದರು. ನಂತರ ಸ್ಥಳದಲ್ಲಿ ಮಹಜರನ್ನು ಬೆ: **11-30** ರಿಂದ ಮ: **12-30** ರವರೆಗೂ ಮಹಜರ್ ಕ್ರಮ ಜರುಗಿಸಿರುತ್ತೇನೆ. ನಾವು ತೆಗೆದುಕೊಂಡು ಹೋಗಿದ್ದ ಇಲಾಖಾ ಜೀಪಿನಲ್ಲಿದ್ದ ಮೈಕಿನ ಸಹಾಯದಿಂದ ಆರೋಪಿ ಮನೋಜನ ಬಗ್ಗೆ

ಸಾರ್ವಜನಿಕವಾಗಿ ಪ್ರಕಟಣೆ ಮಾಡಿರುತ್ತೇವೆ. ಆರೋಪಿಯು ಪತ್ತೆಯಾದ ಬಗ್ಗೆ ಸ್ಥಳೀಯ ಪೋಲೀಸ್ ಠಾಣೆ ಹಾಗೂ ಲಕ್ಕವಳ್ಳಿ ಪೋಲೀಸ್ ಠಾಣೆ ಹಾಗೂ ತರೀಕೆರೆ ನ್ಯಾಯಾಲಯಕ್ಕೆ ಮಾಹಿತಿ ನೀಡುವಂತೆ ಉದ್ಘೋಷಣೆ ಮಾಡಿ ಪಂಚರ ಸಹಿ ಪಡೆದಿರುತ್ತೇನೆ.ನಂತರಆಲೂರು ಗ್ರಾಮ ಪಂಚಾಯ್ತಿ ಆರೋಪಿ ಮನೋಜನ ಸ್ಥಿರ ಆಸ್ತಿ ಬಗ್ಗೆ ಮಾಹಿತಿನೀಡುವಂತೆ ಮನವಿ ಸಲ್ಲಿಸಿರುತ್ತೇನೆ. ದಿಃ***08-08-2018*** ರಂದು ಸದರಿ ಗ್ರಾಮ ಪಂಚಾಯ್ತಿಯವರು ಆರೋಪಿ ಹೆಸರಿನಲ್ಲಿ ಯಾವುದೇ ಸ್ಥಿರ ಆಸ್ತಿ ಇರುವುದಿಲ್ಲ ಎಂದು ವರದಿ ಮಾಡಿರುತ್ತಾರೆ. ಆಲೂರು ಗ್ರಾಮ ಪಂಚಾಯ್ತ ಕಛೇರಿಯ ಮುಂಭಾಗಕ್ಕೆ ಉದ್ಘೋಷಣಾ ವಾರೆಂಟನ್ನು ಅಂಟಿಸಿರುತ್ತೇನೆ. ಆಲೂರು ಗ್ರಾಮ ಪಂಚಾಯ್ತಿ ವಾಸವಾಗಿರುವ ಬಗ್ಗೆ ದಾಖಲಾತಿ ನೀಡಬೇಕೆಂದು ಪಂಚಾಯ್ತಿಗೆ ಮನವಿ ಸಲ್ಲಿಸಿರುತ್ತೇನೆ. ದಿಃ ***08-8-2018*** ರಂದು ಸದರಿ ಪಂಚಾಯ್ತಿಯವರು ಮನೋಜ್ ಎಂಬ ವ್ಯಕ್ತಿ ಸದರಿ ಗ್ರಾಮ ಪಂಚಾಯ್ತಿಯಲ್ಲಿ ವಾಸ ಇರುವುದಿಲ್ಲ ಎಂದು ವರದಿ ನೀಡಿರುತ್ತಾರೆ. ನಂತರ ಠಾಣೆಗೆ ಬಂದು ಪಿ ಎಸ್ ಐ ಹಾಗೂ ನ್ಯಾಯಾಲಯಕ್ಕೆ ಪಿ ಎಸ್ ಐ ರವರ ಮೂಲಕ ವರದಿ ಹಾಗೂ ದಾಖಲಾತಿಗಳನ್ನು ಸಲ್ಲಿಸಿರುತ್ತೇನೆ.

ದಿಃ ***30-08-2018*** ರ ಉದ್ಘೋಷಣಾ ಆದೇಶದ ಪ್ರತಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-***1*** ಎಂದು, ಅದಕ್ಕೆ ಸಂಬಂಧಿಸಿದ ಮಹಜರ್ ಪ್ರತಿಯನ್ನು ಸಾಕ್ಷಿ ಗುರುತಿಸಿದ್ದು ಅದನ್ನು ನಿಪಿ***2*** ಎಂದು, ಸಾಕ್ಷಿ ಸಹಿಯನ್ನು ನಿಪಿ-***2***(ಎ) ಎಂದು ಗುರುತಿಸಲಾಯ್ತು. ಜಪ್ತಿ ಆದೇಶದ ಪ್ರತಿಯನ್ನು ಗುರುತಿಸಿದ್ದು ಅದನ್ನು ನಿಪಿ***3*** ಎಂದು, ಕೇರಳದ ಆಲೂರು ಗ್ರಾಮ ಪಂಚಾಯ್ತಿ ಅಧಿಕಾರಿ ನೀಡಿದ ವರದಿಯನ್ನು ನಿಪಿ-***4*** ಎಂದು, ಓನರ್ಶಿಪ್ ಸರ್ಟಿಫಿಕೇಟನ್ನು ನಿಪಿ-***5*** ಎಂದು, ಸಾಕ್ಷಿ ಸಹಿಯನ್ನು ನಿಪಿ-***5***(ಎ) ಎಂದು, ಪಂಚಾಯ್ತಿ ಸರ್ಟಿಫಿಕೇಟನ್ನು ನಿಪಿ-***6*** ಎಂದು, ಸಾಕ್ಷಿ ಸಹಿಯನ್ನು ನಿಪಿ-***6***(ಎ) ಎಂದು ಗುರುತಿಸಲಾಯ್ತು. ನಿವೇದನೆಯ ಪ್ರತಿಯನ್ನು ನಿಪಿ-***7*** ಎಂದು, ಸಾಕ್ಷಿ ಸಹಿಯನ್ನು ನಿಪಿ-***7***(ಎ) ಎಂದು ಗುರುತಿಸಲಾಯ್ತು.

***ಮರುವಿಚಾರಣೆಃ*** ***ಇರುವುದಿಲ್ಲ.***

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

***ಓ. ಕೇ. ಸ. ಇ. ಎ. ಒ.***

***ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು***
***ಪ್ರ.ದ.ನ್ಯಾ.ದಂ.ರವರು,ತರೀಕೆರೆ.***